ಇ) ಸದರಿ ರಸ್ತೆಗಳ ಉದ್ದ ಹಾಗೂ ಯಾವ ಯಾವ ರಸ್ತೆಗಳನ್ನು ಈ ಕಾಮಗಾರಿಗಾಗಿ ಆಯ್ದುಕೊಳ್ಳಲಾಗಿರುತ್ತದೆ;

ಈ) ಈ ಕಾಮಗಾರಿಗಳಲ್ಲಿ ಸೇತುವೆಗಳು ಸೇರಿವೆಯೇ;

ಉ) ಈ ನಿಟ್ಟಿನಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ಪಾತ್ರವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು) :

ಅ) ಹೌದು. ಸರ್ಕಾರವು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಹಾಗು ರಾಜ್ಯ ಹೆದ್ದಾರಿಗಳಲ್ಲಿನ ಗುಂಡಿಗಳನ್ನು ಮುಚ್ಚಲು 2004–05ರ ವರ್ಷಕ್ಕೆ ಪ್ರತ್ಯೇಕವಾದ ಯೋಜನೆಯನ್ನು ರೂಪಿಸಿದ್ದು ಒಟ್ಟಾರೆ ರೂ. 23500.00 ಲಕ್ಷಗಳನ್ನು ಒದಗಿಸಲಾಗಿದೆ.

ಆ) ಒಟ್ಟಾರೆ ಸುಮಾರು 2000 ರಸ್ತೆ ಕಾಮಗಾರಿಗಳನ್ನು ಕೈಗೊಂಡಿದ್ದು, ಇವುಗಳಲ್ಲಿ ಸುಮಾರು 1600 ಸಂಖ್ಯೆ ಟೆಂಡರ್ ಮೂಲಕ ಗುತ್ತಿಗೆ ನೀಡಲಾಗಿದೆ.

ಇ) 30,824 ಕಿಮೀ ಜಿಲ್ಲಾ ಮುಖ್ಯ ರಸ್ತೆಗಳ ಹಾಗೂ 17,013 ಕಿಮೀ ರಾಜ್ಯ ಹೆದ್ದಾರಿಗಳ ಅತಿ ಹಾಳಾದ ಭಾಗಗಳನ್ನು ಈ ಯೋಜನೆಯಡಿ ಆಯ್ದುಕೊಳ್ಳಲಾಗಿದೆ.

ಈ) ಸೇರಿರುವುದಿಲ್ಲ.

ಉ) ಇದರಡಿ ನಿಗಮದ ಪಾತ್ರ ಇರುವುದಿಲ್ಲ.

ಮಿನಿ ವಿಧಾನ ಸೌಧ ಕಟ್ಟಡದ ಬಗ್ಗೆ

32(861) ಶ್ರೀ ಬಸವರಾಜು ಹೆಚ್.ಡಿ. (ವಿರಾಜಪೇಟ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ವಿರಾಜಪೇಟೆ ತಾಲ್ಲೂಕಿನ ಮಿನಿ ವಿಧಾನ ಸೌಧ ನಿರ್ಮಾಣದ ಬಗ್ಗೆ ಸರ್ಕಾರ ಯಾವ ಕಾರ್ಯಕ್ರಮ ಹಾಕಿಕೊಂಡಿದೆ.

ಆ) ಹಾಕಿಕೊಂಡಿದ್ದಲ್ಲಿ, ಈ ಪ್ರಕ್ರಿಯೆ ಯಾವ ಹಂತದಲ್ಲಿದೆ ಹಾಗೂ ಇದರ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುತ್ತದೆ.

ಇ) ಇದಕ್ಕಾಗಿ ನಿಗಧಿಪಡಿಸಿರುವ ಹಣವೆಷ್ಟು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ವಿರಾಜಪೇಟ್ ತಾಲ್ಲೂಕು ಸೇರಿದಂತೆ ರಾಜ್ಯದ 86 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಾಣದ ಪ್ರಕ್ರಿಯೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಈ ಬಗ್ಗೆ ಅಗತ್ಯ ಸಂಪನ್ಮೂಲಗಳ ವ್ಯವಸ್ಥೆ ಮಾಡುವ ಕುರಿತು ಸರ್ಕಾರವು ಕ್ರಮ ಜರುಗಿಸುತ್ತಿದೆ. ಸಂಪನ್ಮೂಲಗಳನ್ನು ಒದಗಿಸುವ ಕಾರ್ಯ ಪೂರ್ಣಗೊಂಡ ನಂತರ ಅಂದಾಜುಪಟ್ಟಿಯನ್ನು ತಯಾರಿಸಿ, ಮಿನಿ ವಿಧಾನ ಸೌಧದ ನಿರ್ಮಾಣವನ್ನು ಕೈಗೊಳ್ಳಲಾಗುವುದು.

ಇ) ಹಣ ನಿಗಧಿಪಡಿಸುವ ವಿಷಯ ಪರಿಶೀಲನೆಯಲ್ಲಿದೆ.

33(862) ಶ್ರೀ ಬಸವರಾಜು ಹೆಚ್.ಡಿ. (ವೀರಾಜಪೇಟೆ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೊಡಗು ಜಿಲ್ಲೆ ವಿರಾಜಪೇಟೆಯಲ್ಲಿ ಅವ್ಯವಹಾರವಾಗಿ ನಡೆಯುತ್ತಿರುವ ಸ್ಪಿರಿಟ್ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ: